# ಪ್ರವಾದಿ ﷺ ರವರ ಜನ್ಮದಿನಾಚರಣೆಯನ್ನು ಆಚರಿಸುವುದರ ವಿಧಿ

[حكم الاحتفال بمولد النبي صلى الله عليه وسلم ]

[Kannada – ಕನ್ನಡ – كنادي ]


ಅಶ್ಶೈಖ್ ಸಾಲಿಹ್ ಇಬ್ನ್ ಫೌಝಾನ್ ಅಲ್‌ಫೌಝಾನ್

الشيخ صالح بن فوزان الفوزان

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ترجمة: محمد حمزة بتوري



IslamHouse.com

1436 – 2014

بِسْمِ اللهِ الرَّحْمَـنِ الرَّحِيم

ಹಲವಾರು ಕಾರಣಗಳಿಂದಾಗಿ ಮೀಲಾದುನ್ನಬಿ ಆಚರಣೆಯು ನಿಷಿದ್ಧವಾಗಿದೆ ಮತ್ತು ತಿರಸ್ಕೃತವಾಗಿದೆ.

ಮೊದಲನೆಯದಾಗಿ, ಅದು ಪ್ರವಾದಿ(ﷺ)ರವರ ಸುನ್ನತ್ತಿನಲ್ಲಾಗಲಿ ಅವರ ಸಹಾಬಾಗಳ ಸುನ್ನತ್ತಿನಲ್ಲಾಗಲಿ ಸೇರಿದ್ದಲ್ಲ. ಯಾವುದರ ಸ್ಥಿತಿಯು ಹೀಗಿದೆಯೋ ಅದು ನಿಷಿದ್ಧ ಬಿದ್‌ಅತ್ ಆಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

«عَلَيْكُمْ بِسُنَّتِي وَسُنَّةِ الْخُلَفَاءِ الرَّاشِدِينَ الْمَهْدِيِّينَ مِنْ بَعْدِي، تَمَسَّكُوا بِهَا وَعَضُّوا عَلَيْهَا بِالنَّوَاجِذِ، وَإِيَّاكُمْ وَمُحْدَثَاتِ الْأُمُورِ، فَإِنَّ كُلَّ مُحْدَثَةٍ بِدْعَةٌ، وَكُلَّ بِدْعَةٍ ضَلَالَةٌ»

**"ನೀವು ನನ್ನ ಸುನ್ನತ್ ಮತ್ತು ನನ್ನ ಬಳಿಕ ಬರುವ ಸನ್ಮಾರ್ಗಿಗಳಾದ ಅಲ್‌ಖುಲಫಾಉ ರ್‍ರಾಶಿದೂನ್‌ಗಳ ಸುನ್ನತ್ತನ್ನು ಅವಲಂಬಿಸಿರಿ. ಅವುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳಿರಿ ಮತ್ತು ದವಡೆ ಹಲ್ಲಿನಿಂದ ಕಚ್ಚಿ ಹಿಡಿಯಿರಿ. ಹೊಸ ಹೊಸ ವಿಷಯಗಳ ಬಗ್ಗೆ ಎಚ್ಚರ ವಹಿಸಿರಿ. ಯಾಕೆಂದರೆ ಹೊಸದಾಗಿರುವುದೆಲ್ಲವೂ ಬಿದ್‌ಅತ್ ಆಗಿವೆ ಮತ್ತು ಎಲ್ಲ ಬಿದ್‌ಅತ್‌ಗಳೂ ಪಥಭ್ರಷ್ಟತೆಯಾಗಿವೆ."** [ಅಹ್ಮದ್, ಅತ್ತಿರ್ಮಿದಿ]

ಮೀಲಾದ್ ಆಚರಣೆಯು ಹೊಸದಾಗಿದೆ. ಮೂರು ಉತ್ತಮ ಶತಮಾನಗಳ ಬಳಿಕ ಫಾತಿಮೀ ಶಿಯಾಗಳು ಮುಸ್ಲಿಮರ ಧರ್ಮವನ್ನು ಭ್ರಷ್ಟಗೊಳಿಸುವುದಕ್ಕಾಗಿ ಇದನ್ನು ನೂತನವಾಗಿ ಜಾರಿಗೆ ತಂದರು. ಪ್ರವಾದಿ(ﷺ)ರವರು ಮಾಡದ, ಅವರು ಆಜ್ಞಾಪಿಸದ, ಅವರ ನಂತರದ ಖುಲಫಾಗಳು ಮಾಡದ, ಯಾವುದಾದರೊಂದು ಕರ್ಮದ ಮೂಲಕ ಅಲ್ಲಾಹನ ಸಾಮೀಪ್ಯ ಪಡೆಯಲು ಸಾಧ್ಯವೆಂದು ಭಾವಿಸಿ ಯಾರಾದರೂ ಅದನ್ನು ಮಾಡುವುದಾದರೆ ಅವನು ಪ್ರವಾದಿ(ﷺ)ರವರು ಜನರಿಗೆ ಅವರ ಧರ್ಮವನ್ನು ತಲುಪಿಸಿಕೊಟ್ಟಿಲ್ಲವೆಂದು ಆರೋಪಿಸುವವನಾಗಿದ್ದಾನೆ ಮತ್ತು ಅಲ್ಲಾಹನ ಈ ಕೆಳಗಿನ ವಚನವನ್ನು ಸುಳ್ಳಾಗಿಸುವವನಾಗಿದ್ದಾನೆ:

﴿ الْيَوْمَ أَكْمَلْتُ لَكُمْ دِينَكُمْ ﴾

**"ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಸಂಪೂರ್ಣಗೊಳಿಸಿರುವೆನು."** [ಕುರ್‌ಆನ್ 5:3]

ಎರಡನೆಯದಾಗಿ, ಮೀಲಾದ್ ಆಚರಣೆಯಲ್ಲಿ ಕ್ರೈಸ್ತರೊಂದಿಗಿನ ಅನುಕರಣೆಯಿದೆ. ಯಾಕೆಂದರೆ ಅವರು ಈಸಾ(ﷺ)ರವರ ಜನ್ಮದಿನವನ್ನು ಆಚರಿಸುತ್ತಾರೆ. ಅವರನ್ನು

ಅನುಕರಿಸುವುದು ನಿಷಿದ್ಧವಾಗಿದೆ. ಕಠಿಣವಾದ ನಿಷಿದ್ಧವಾಗಿದೆ. ಅವಿಶ್ವಾಸಿಗಳನ್ನು ಅನುಕರಿಸುವುದನ್ನು ವಿರೋಧಿಸುವ ಮತ್ತು ಅವರಿಗೆ ವಿರುದ್ಧವಾಗಿ ವರ್ತಿಸಬೇಕೆಂದು ಆದೇಶಿಸುವ ಹದೀಸ್ ಸಹೀಹಾಗಿ ವರದಿಯಾಗಿದೆ. ಪ್ರವಾದಿ(ﷺ)ರವರು ಹೇಳಿದರು:

«مَنْ تَشَبَّهَ بِقَوْمٍ فَهُوَ مِنْهُمْ»

**“ಯಾರಾದರೂ ಒಂದು ಜನತೆಯನ್ನು ಅನುಕರಿಸಿದರೆ ಅವನು ಅವರಲ್ಲಿ ಸೇರಿದವನಾಗಿದ್ದಾನೆ.”** [ಅಹ್ಮದ್, ಅಬೂ ದಾವೂದ್]

«خَالِفُوا الْمُشْرِكِينَ»

**“ಮುಶ್ರಿಕರಿಗೆ ವಿರುದ್ಧವಾಗಿರಿ.”** [ಮುಸ್ಲಿಮ್] ವಿಶೇಷವಾಗಿ ಅವರ ಧಾರ್ಮಿಕ ಆಚಾರಗಳಲ್ಲಿ ಅವರಿಗೆ ವಿರುದ್ಧವಾಗಬೇಕಾಗಿದೆ.

ಮೂರನೆಯದಾಗಿ, ಮೀಲಾದ್ ಆಚರಣೆಯು ಬಿದ್‌ಅತ್ ಮತ್ತು ಕ್ರೈಸ್ತರ ಅನುಕರಣೆ ಆಗಿರುವುದರೊಂದಿಗೆ –ಇವೆರಡೂ ನಿಷಿದ್ಧವಾಗಿವೆ– ಅದು ಪ್ರವಾದಿ(ﷺ)ರವರ ಬಗ್ಗೆ ಹದ್ದುಮೀರಲು ಮತ್ತು ಅಲ್ಲಾಹನ ಹೊರತಾಗಿ ಅವರೊಂದಿಗೆ ಪ್ರಾರ್ಥಿಸಲು ಮತ್ತು ಸಹಾಯ ಯಾಚನೆ ಮಾಡಲು ಕಾರಣವಾಗುತ್ತದೆ. ಇಂದು ಮೌಲಿದ್ ಆಚರಣೆ ಮಾಡುವವರ ಪೈಕಿ ಹೆಚ್ಚಿನವರಲ್ಲೂ ನಾವಿದನ್ನು ಕಾಣುತ್ತಿದ್ದೇವೆ. ಅವರು ಅಲ್ಲಾಹನನ್ನು ಬಿಟ್ಟು ಪ್ರವಾದಿ(ﷺ)ರವರೊಂದಿಗೆ ಪ್ರಾರ್ಥಿಸುತ್ತಾರೆ, ಅವರೊಂದಿಗೆ ಸಹಾಯ ಯಾಚನೆ ಮಾಡುತ್ತಾರೆ, ಮದ್‌ಹ್ ಎಂಬ ಹೆಸರಲ್ಲಿ ಬುರ್ದಾ ಮೊದಲಾದ ಶಿರ್ಕ್‌ನ ಕವಿತೆಗಳನ್ನು ಹಾಡುತ್ತಾರೆ. ಮದ್‌ಹ್‌ನಲ್ಲಿ ಹದ್ದುಮೀರುವುದನ್ನು ಪ್ರವಾದಿ(ﷺ)ರವರು ನಮಗೆ ವಿರೋಧಿಸಿದ್ದಾರೆ. ಅವರು ಹೇಳಿದರು:

«لَا تُطْرُونِي كَمَا أَطْرَتِ النَّصَارَى ابْنَ مَرْيَمَ، فَإِنَّمَا أَنَا عَبْدُهُ، فَقُولُوا عَبْدُ اللَّهِ وَرَسُولُهُ»

**“ಕ್ರೈಸ್ತರು ಈಸಾ ಇಬ್ನ್ ಮರ್ಯಮ್‌ರವರನ್ನು ಮಿತಿಮೀರಿ ಹೊಗಳಿದಂತೆ ನೀವು ನನ್ನನ್ನು ಮಿತಿಮೀರಿ ಹೊಗಳದಿರಿ. ನಾನು ಅಲ್ಲಾಹನ ಒಬ್ಬ ದಾಸ ಮಾತ್ರವಾಗಿರುವೆನು. ಆದ್ದರಿಂದ ಅಲ್ಲಾಹನ ದಾಸ ಮತ್ತು ಅವನ ರಸೂಲ್ ಎಂದು ಹೇಳಿರಿ.”** [ಅಲ್‌ಬುಖಾರಿ]

ಅಂದರೆ ಕ್ರೈಸ್ತರು ಈಸಾ(ﷺ)ರವರನ್ನು ಮಿತಿಮೀರಿ ಹೊಗಳುತ್ತಾ, ಆದರಿಸುತ್ತಾ ಅವರನ್ನು ಅಲ್ಲಾಹನ ಹೊರತಾಗಿ ಆರಾಧಿಸಿದಂತೆ ನೀವು ನನ್ನನ್ನು ಮಿತಿಮೀರಿ ಹೊಗಳದಿರಿ ಮತ್ತು ಮಿತಿಮೀರಿ ಆದರಿಸದಿರಿ ಎಂದರ್ಥ. ಈ ವಿಷಯದಲ್ಲಿ ಅಲ್ಲಾಹು ಕೂಡ ಅವರನ್ನು (ಯಹೂದ ಕ್ರೈಸ್ತರನ್ನು) ವಿರೋಧಿಸಿದ್ದಾನೆ. ಅಲ್ಲಾಹು ಹೇಳಿದನು:

﴿ يَا أَهْلَ الْكِتَابِ لَا تَغْلُوا فِي دِينِكُمْ وَلَا تَقُولُوا عَلَى اللَّهِ إِلَّا الْحَقَّ إِنَّمَا الْمَسِيحُ عِيسَى ابْنُ مَرْيَمَ رَسُولُ اللَّهِ وَكَلِمَتُهُ أَلْقَاهَا إِلَى مَرْيَمَ وَرُوحٌ مِنْهُ ﴾

**“ಓ ಗ್ರಂಥದವರೇ, ನೀವು ನಿಮ್ಮ ಧರ್ಮದಲ್ಲಿ ಹದ್ದುಮೀರದಿರಿ. ಅಲ್ಲಾಹನ ಹೆಸರಲ್ಲಿ ಸತ್ಯವನ್ನೇ ಹೊರತು ಬೇರೇನನ್ನೂ ಹೇಳದಿರಿ. ಅಲ್‌ಮಸೀಹ್ ಇಬ್ನ್ ಮರ್ಯಮ್ ಅಲ್ಲಾಹನ ರಸೂಲ್, ಮರ್ಯಮ್‌ರಿಗೆ ಅವನು ಹಾಕಿಕೊಟ್ಟ ಒಂದು ವಚನ ಮತ್ತು ಅವನ ವತಿಯ ಒಂದು ಆತ್ಮ ಮಾತ್ರವಾಗಿರುವರು.”** [ಕುರ್‌ಆನ್ 4:171]

ಗ್ರಂಥದವರಿಗೆ ಸಂಭವಿಸಿದ್ದು ನಮಗೂ ಸಂಭವಿಸಬಹುದೆಂಬ ಭಯದಿಂದಾಗಿ ಮಿತಿಮೀರುವುದನ್ನು ಪ್ರವಾದಿ(ﷺ)ರವರು ನಮಗೆ ವಿರೋಧಿಸಿದರು. ಅವರು ಹೇಳಿದರು:

«إِيَّاكُمْ وَالْغُلُوَّ، فَإِنَّمَا أَهْلَكَ مَنْ كَانَ قَبْلَكُمُ الْغُلُوُّ»

**“ನೀವು ಮಿತಿಮೀರುವುದರ ಬಗ್ಗೆ ಎಚ್ಚರವಹಿಸಿರಿ. ಯಾಕೆಂದರೆ ನಿಮಗಿಂತ ಮುಂಚಿನವರನ್ನು ನಾಶ ಮಾಡಿದ್ದು ಮಿತಿಮೀರುವಿಕೆಯಾಗಿದೆ.”** [ಅನ್ನಸಾಈ]

ನಾಲ್ಕನೆಯದಾಗಿ, ಮೀಲಾದ್ ಆಚರಣೆ ಎಂಬ ಬಿದ್‌ಅತ್ ಇತರ ಬಿದ್‌ಅತ್‌ಗಳಿಗೆ ಬಾಗಿಲನ್ನು ತೆರೆಯುತ್ತದೆ. ಇದರಿಂದಾಗಿ ಜನರು ಸುನ್ನತ್ತನ್ನು ಬಿಟ್ಟು ಬಿದ್‌ಅತ್‌ಗಳಲ್ಲಿ ಮಗ್ನರಾಗುತ್ತಾರೆ. ಆದ್ದರಿಂದಲೇ ಬಿದ್‌ಅತ್‌ಗಾರರು ಬಿದ್‌ಅತ್ ಆಚರಿಸುವುದರಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಾರೆ ಮತ್ತು ಸುನ್ನತ್ ಆಚರಿಸುವುದರಲ್ಲಿ ನಿರಾಸಕ್ತರಾಗುತ್ತಾರೆ. ಅವರು ಸುನ್ನತ್ತಿನ ಜನರನ್ನು ದ್ವೇಷಿಸುತ್ತಾರೆ. ಅವರು ಬಿದ್‌ಅತ್‌ಗಳಲ್ಲಿ ಎಷ್ಟರ ಮಟ್ಟಿಗೆ ಮಗ್ನರಾಗುತ್ತಾರೆಂದರೆ ಅವರ ಧರ್ಮವು ಸಂಪೂರ್ಣವಾಗಿ ಸ್ಮಾರಕೋತ್ಸವಗಳು ಮತ್ತು ಮೌಲಿದ್‌ಗಳಿಂದ ತುಂಬಿ ಹೋಗಿವೆ. ಅವರ ಪೈಕಿ ಪ್ರತಿಯೊಂದು ಗುಂಪೂ ಅವರ ನಾಯಕರ ಜನ್ಮದಿನವನ್ನು ಆಚರಿಸುತ್ತಿರುತ್ತಾರೆ. ಬದವೀ ಮೌಲಿದ್, ಇಬ್ನ್ ಅರಬೀ ಮೌಲಿದ್, ದಸೂಕೀ ಮೌಲಿದ್, ಶಾದುಲೀ ಮೌಲಿದ್ ಹೀಗೆ ಒಂದು ಮೌಲಿದ್ ಮುಗಿದೊಡನೆ ಇನ್ನೊಂದು ಮೌಲಿದ್‌ನಲ್ಲಿ ಮಗ್ನರಾಗುತ್ತಾರೆ. ತನ್ಮೂಲಕ ಅವರು ಹದ್ದುಮೀರಿ ಅಲ್ಲಾಹನ ಹೊರತು ಆ ಮರಣಹೊಂದಿದ ಸಜ್ಜನರನ್ನು ಪ್ರಾರ್ಥಿಸುತ್ತಾರೆ. ಇದರ ಬಗ್ಗೆ ಕೇಳಿದರೆ ಇವರ ಉತ್ತರವು (ಜಾಹಿಲೀ ಕಾಲದ ಮುಶ್ರಿಕರು ಹೇಳುತ್ತಿದ್ದಂತೆ) ಇವರು ನಮಗೆ ಲಾಭವನ್ನು ತರುತ್ತಾರೆ ಮತ್ತು ನಮ್ಮಿಂದ ಹಾನಿಯನ್ನು ನಿವಾರಿಸುತ್ತಾರೆ ಎಂದಾಗಿರುತ್ತದೆ. ಹೀಗೆ ಅವರು ಇಸ್ಲಾಮ್ ಧರ್ಮದಿಂದ ಕಳಚಿ ಹೋಗಿ ಜಾಹಿಲೀ ಕಾಲದ ಧರ್ಮಕ್ಕೆ ಮರುಳುತ್ತಿದ್ದಾರೆ. ಆ ಜಾಹಿಲೀ ಕಾಲದ ಜನರ ಬಗ್ಗೆ ಅಲ್ಲಾಹು ಹೇಳುವುದನ್ನು ನೋಡಿರಿ:

﴿ وَيَعْبُدُونَ مِنْ دُونِ اللَّهِ مَا لَا يَضُرُّهُمْ وَلَا يَنْفَعُهُمْ وَيَقُولُونَ هَؤُلَاءِ شُفَعَاؤُنَا عِنْدَ اللَّهِ ﴾

**“ಅಲ್ಲಾಹನ ಹೊರತು ಅವರಿಗೆ ಯಾವುದೇ ಹಾನಿಯನ್ನು ಮಾಡದ ಮತ್ತು ಲಾಭವನ್ನು ಮಾಡದವರನ್ನು ಅವರು ಆರಾಧಿಸುತ್ತಿದ್ದಾರೆ. ಮತ್ತು ಅವರು ಹೇಳುತ್ತಾರೆ: ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸುಗಾರರಾಗಿದ್ದಾರೆ.”** [ಕುರ್‌ಆನ್ 10:18]

﴿ وَالَّذِينَ اتَّخَذُوا مِنْ دُونِهِ أَوْلِيَاءَ مَا نَعْبُدُهُمْ إِلَّا لِيُقَرِّبُونَا إِلَى اللَّهِ زُلْفَى ﴾

**“ಅಲ್ಲಾಹನ ಹೊರತು ಇತರರನ್ನು ಔಲಿಯಾಗಳನ್ನಾಗಿ ಮಾಡಿಕೊಂಡವರು (ಹೇಳುವರು): ಇವರು ನಮ್ಮನ್ನು ಅಲ್ಲಾಹನೆಡೆಗೆ ಸಮೀಪಗೊಳಿಸುತ್ತಾರೆ ಎಂಬ ನಂಬಿಕೆಯಿಂದಲ್ಲದೆ ನಾವು ಇವರನ್ನು ಆರಾಧಿಸುತ್ತಿಲ್ಲ.”** [ಕುರ್‌ಆನ್ 39:3]

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .

*********